ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವುದು

2604 (3366) ಶ್ರೀ ರಾಮಲಿಂಗ ರೆಡ್ಡಿ (ಜಯನಗರ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯ ಹೊಸ ಕಟ್ಟಡ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಯಿತು?

ಆ) ಇದಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಇ) ಈ ಕಟ್ಟಡವು ಪೂರ್ಣಗೊಂಡಿದೆಯೇ?

ಈ) ಈ ಹೊಸ ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಉ) ಈ ಆಸ್ಪತ್ರೆಗೆ ಬೇಕಾಗುವ ವೈದ್ಯಕೀಯ ಉಪಕರಣಗಳ ವೆಚ್ಚವೆಷ್ಟು?

ಊ) ಸದರಿ ಆಸ್ಪತ್ರೆಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆಯೇ?

ಋ) ಆಸ್ಪತ್ರೆಯನ್ನು ಯಾವಾಗ ಕಾರ್ಯಾರಂಭ ಮಾಡಲಾಗುವುದು?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ದಿನಾಂಕ : 4-7-1994 ರಲ್ಲಿ ಪ್ರಾರಂಭವಾಯಿತು

ಆ) ಒಟ್ಟು ರೂ.3903 ಲಕ್ಷಗಳು

ಇ) ಕಟ್ಟಡವು ಪೂರ್ಣವಾಗಿ ಮುಗಿದಿದೆ. ಈಗ ಈ ಕೆಲಸಗಳ ಪರಿವೀಕ್ಷಣೆ ಮತ್ತು ಚಾಲನೆ ಮಾಡುವ ಹಂತದಲ್ಲಿದೆ.

ಈ) ಒಟ್ಟು 519 ಹಾಸಿಗೆಗಳು

ಉ) ರೂ.26.80 ಕೋಟಿ

ಊ) ಸಿಬ್ಬಂದಿಯನ್ನು ಭರ್ತಿ ಮಾಡಲು ಆರ್ಡರ್‌ಗಳನ್ನು ಕರೆಯಲಾಗಿದೆ.

ಋ) ದಿನಾಂಕ 16-08-2001 ರಂದು ಕಾರ್ಯಾರಂಭ ಮಾಡಲು ಉದ್ದೇಶಿಸಲಾಗಿದೆ.

ರಾಜ್ಯದ ಹೆದ್ದಾರಿಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳು

2605(3367) ಶ್ರೀ ರಾಮಲಿಂಗ ರೆಡ್ಡಿ (ಜಯನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದ ಹೆದ್ದಾರಿಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳನ್ನು ಸರ್ಕಾರ ತೆರೆದಿದೆಯೆ?

ಆ. ಹಾಗಿದ್ದಲ್ಲಿ, ಎಲ್ಲೆಲ್ಲಿ ಈ ಘಟಕಗಳನ್ನು ತೆರೆಯಲಾಗಿದೆ?